793 (531) ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಬಳಿ ಸೇತುವೆ ನಿರ್ಮಾಣ ಮಾಡಿದ್ದು, ಅದರಿಂದ ಗದಗ ಮುಂಡರಗಿ–ಹಡಗಲಿ ಮಾರ್ಗವಾಗಿ ಬೆಂಗಳೂರಿಗೆ ಹೋಗಲು ಎಷ್ಟು ಕಿಮೀ ಉಳಿತಾಯ ಆಗುತ್ತದೆ ?

ಆ) ಸದರಿ ಸೇತುವೆ ಆದ ನಂತರ ವಾಹನ ಸಂಚಾರ ಹೆಚ್ಚಾಗಿರುವುದು ನಿಜವೇ?

ಇ) ಹೆದ್ದಾರಿ ಸಂಖ್ಯೆ 63 ಗದಗ ತಾಲ್ಲೂಕು ಅಡವಿಸೋಮಾಪುರದಿಂದ ಮುಂಡರಗಿ ತಾಲ್ಲೂಕು ಹಮ್ಮಿಗಿ ವಿಠಲಾಪುರದವರೆಗೆ ರಸ್ತೆ ಸುಧಾರಿಸಲು ಸಿ.ಆರ್.ಎಫ್. ಅಡಿಯಲ್ಲಿ ಸೇರಿಸಿ ಕಾಮಗಾರಿ ಕೈಗೊಳ್ಳಲಾಗುವುದೇ (ವಿವರ ನೀಡುವುದು)?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಬಳಿ ಸೇತುವೆ ನಿರ್ಮಾಣ ಮಾಡಿರುವುದರಿಂದ ಗದಗ–ಮುಂಡರಗಿ–ಹಡಗಲಿ–ಇಟ್ಟಿಗಿ–ಕೊಟ್ಟೂರ–ಉಜ್ಜಯಿನಿ–ಜಗಳೂರ–ಜೋಗಹಳ್ಳಿ–ಚಿತ್ರದುರ್ಗ ಮುಖಾಂತರ ಬೆಂಗಳೂರಿಗೆ ಹೋಗಲು 45.00 ಕಿಮೀ ಉಳಿತಾಯವಾಗುತ್ತದೆ.

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರವು ಹೆಚ್ಚಾಗಿರುವುದು ನಿಜ.

ಇ) ಗದಗ–ಮುಂಡರಗಿ–ಹೆಸರೂರ ರಸ್ತೆ ಕಿಮೀ 7:50 ರಿಂದ 12.20 ರವರೆಗೆ (ಆಯ್ದಭಾಗಗಳಲ್ಲಿ) ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಸುಧಾರಣೆ ಕೆಲಸದ ಟೆಂಡರ್ ರೂ. 41.02 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಸುಧಾರಣೆ ಕೆಲಸವು ಪ್ರಾರಂಭವಾಗಿದೆ.

794(532) ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗದಗ ಜಿಲ್ಲಾ ಮುಂಡರಗಿ ಕ್ರೀಡಾಂಗಣಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ನೀಡಿರುವ ಸರ್ವೆ ನಂ.5ರ ಜಮೀನಿನಲ್ಲಿರುವ ವಿದ್ಯುತ್ ಕಂಬಗಳನ್ನು ತೆರವು ಮಾಡಲು ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದ್ಯುತ್ ಕಂಬಗಳನ್ನು ತೆಗೆದಿಲ್ಲದಿರುವುದರಿಂದ ಕ್ರೀಡಾಂಗಣ ಮಾಡಲು ತೊಂದರೆಯಾಗಿರುವುದರಿಂದ ಎಷ್ಟು ದಿನಗಳಲ್ಲಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಈ ಕ್ರೀಡಾಂಗಣಕ್ಕೆ ನೀಡಿರುವ ಜಮೀನಿನಲ್ಲಿ 33 ಕೆ.ವಿ. ಸಿಂಗಟಾಲೂರು ವಿದ್ಯುತ್ ಲೈನು ಹಾಗೂ 11 ಕೆ.ವಿ. ಕಲಕೇರಿ ಫೀಡರುಗಳು ಪ್ರತ್ಯೇಕವಾಗಿ ಹಾಯ್ದು ಹೋಗಿರುತ್ತವೆ. ಈ ಎರಡೂ ಮಾರ್ಗಗಳ ಸ್ಥಳಾಂತರಕ್ಕಾಗಿ ಅಂದಾಜು ಪಟ್ಟಿಗಳನ್ನು "ಠೇವಣಿ ವಂತಿಗೆ" ಶೀರ್ಷಿಕೆಯಲ್ಲಿ ತಯಾರಿಸಿದ್ದು, ಅಂದಾಜು ವೆಚ್ಚ ಅನುಕ್ರಮವಾಗಿ ರೂ. 1,75,574/– ಹಾಗೂ ರೂ. 5.964/– ಗಳನ್ನು ಸಂದಾಯ ಮಾಡುವಂತೆ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ. ಗದಗರವರಿಗೆ